**ದೋ.ಸಾ. : 01 ಫ್ರಾ.ಸಾ. : 02**

**ದಿನಾಂಕಃ 12-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

7. ಚಾಸಾ-10 ರವರು ತನ್ನ ಮೊಬೈಲ್ ನಲ್ಲಿ ಚಿತ್ರೀಕರಿಸಿದ ದೃಶ್ಯಾವಳಿಯನ್ನು ಸಾಕ್ಷಿಗೆ ತೋರಿಸಲಾಗಿ, ಸದರಿ ದೃಶ್ಯಾವಳಿಯಲ್ಲಿ, ತನ್ನ ಗಂಡನು ಪಿಂಕ್ ಬಣ್ಣದ ಅಂಗಿಯನ್ನು ಧರಿಸಿರುವುದಾಗಿ, ಹಾಗೂ ಆರೋಪಿಯು ನೀಲಿ ಬಣ್ಣದ ಅಂಗಿಯನ್ನು ಧರಿಸಿರುವುದಾಗಿ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದಲ್ಲದೇ ಆರೋಪಿಯು ತನ್ನ ಕೈಯಲ್ಲಿ ಚಾಕು ಹಿಡಿದುಕೊಂಡಿರುತ್ತಾನೆ ಹಾಗೂ ತನ್ನ ಗಂಡನು ಕೈಯಲ್ಲಿ ಒಂದು ಅಡಿಕೆ ಮರದ ದಬ್ಬೆಯನ್ನು ಹಿಡಿದುಕೊಂಡು, ಆರೋಪಿಯ ಕೈಗೆ ಹೊಡೆದಾಗ, ಆರೋಪಿ ತನ್ನ ಕೈಯಲ್ಲಿದ್ದ ಚಾಕುವಿನಿಂದ ನನ್ನ ಗಂಡನನ್ನು ಸಾಯಿಸಿಯೇ ಬಿಡುತ್ತೇನೆಂದು ಹೇಳುತ್ತಾ, ನನ್ನ ಗಂಡನ ಎದೆಗೆ ಚಾಕುವಿನಿಂದ ಚುಚ್ಚಿರುತ್ತಾನೆ. ಸದರಿ ದೃಶ್ಯಾವಳಿಯನ್ನು ನ್ಯಾಯಾಲಯದಲ್ಲಿ ಪ್ಲೇ ಮಾಡಿ ನೋಡಲಾಗಿರುತ್ತದೆ ಹಾಗೂ ದೃಶ್ಯಾವಳಿಯಲ್ಲಿ ವಿಡಿಯೋ ಸ್ಪಷ್ಟವಾಗಿ ಕಾಣುತ್ತಿರುತ್ತದೆ ಹಾಗೂ ಶಬ್ದವು ಸ್ಪಷ್ಟವಾಗಿ ಕೇಳುತ್ತಿರುತ್ತದೆ ಮತ್ತು ದೃಶ್ಯಾವಳಿಯು ದಿಃ 03-05-2021ರಂದು ಮದ್ಯಾಹ್ನ 13-14 ಎಂದು ಶೇಖರಣೆಗೊಂಡಿರುತ್ತದೆ ಹಾಗೂ ಸದರಿ ವಿಡಿಯೋ 15 ಸೆಕೆಂಡ್ ಗಳ ಕಾಲದ, 83.79 ಎಂ.ಬಿ ಗಾತ್ರದ್ದಾಗಿರುತ್ತದೆ. ಘಟನೆಯ ದೃಶ್ಯಾವಳಿಯನ್ನು ಚಿತ್ರೀಕರಿಸಿದ ಮೊಬೈಲ್ ರೆಡ್ ಮಿ ನೋಟ್-9 ಪ್ರೊ ಆಗಿರುತ್ತದೆ. ಸದರಿ ಮೊಬೈಲ್ ನ್ನು ಮುದ್ದೆ ಮಾಲು-11 ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲದಲ್ಲಿ ತೆಗೆದ 4 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-11 ರಿಂದ ನಿಪಿ-14 ಎಂದು ಗುರುತಿಸಲಾಯಿತು. ನಿಪಿ-11 ಮತ್ತು 12 ರಲ್ಲಿ ತನ್ನ ಗಂಡನ ಮೃತ ದೇಹವನ್ನು ಹಾಗೂ ನಿಪಿ-13 ಮತ್ತು 14 ರಲ್ಲಿ ಚಾಕುವಿನಿಂದ ಚುಚ್ಚಿದ ಗಾಯದ ಗುರುತನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ. ರವರಿಂದ.**

ಸಾಕ್ಷಿದಾರ 1, 10, 14 ರವರ ಮುಖ್ಯ ವಿಚಾರಣೆ ಆಗುವವರೆಗೆ ಸದರಿ ಸಾಕ್ಷಿಗಳ ಪಾಟೀ ಸವಾಲನ್ನು ಮುಂದೂಡುವಂತೆ ಆರೋಪಿ ಪರ ವಕೀಲರು ಸಿ.ಆರ್.ಪಿ.ಸಿ ಕಲಂ 231(2)

ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ಪುರಸ್ಕಾರವಾಗಿರುವುದರಿಂದ, ಈ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ